**ಸಾಕ್ಷಿಯನ್ನು ಇಂದು ದಿನಾಂಕಃ23.11.2023 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲು ಎದುರುದಾರರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ.**

ನನಗೆ ವಯಸ್ಸು 33 ವರ್ಷಗಳು. ಎದುರುದಾರರ ವಯಸ್ಸು ನನಗೆ ಗೊತ್ತಿಲ್ಲ. ಅಂದಾಜು ಅವರಿಗೆ 60-70 ಇರಬಹುದು ಎಂದರೆ ಸರಿ. ನಮ್ಮ ಮದುವೆ ಆಗುವಾಗ ಲಗ್ನ ಪತ್ರಿಕೆ ಇರಲಿಲ್ಲ. ಎದುರುದಾರರು ಲಗ್ನ ಪತ್ರಿಕೆಯನ್ನು ಬರೆಯಿಸಿರಲಿಲ್ಲ. ನಮ್ಮ ವಿವಾಹವು ಕಡಗಂಚಿ ಶಾಂತೇಶ್ವರ ಗುಡಿಯಲ್ಲಿ ಜರುಗಿತು. ನಮ್ಮೂರಿನಿಂದ ಕಡಗಂಚಿ 60-70 ಕಿ.ಮಿ. ಅಂತರದಲ್ಲಿ ಇದೆ. ನನ್ನ ಮದುವೆ ಸಮಯದಲ್ಲಿ ಟೆಂಟ ವೆಗೈರೆ ಹಾಕಿರಲಿಲ್ಲ ಹಿರಿಯರು ಕೂಡಿ ಮಾಡಿದ್ದರು. ಹಿರಿಯರು ಎಂದರೆ ಶಿವಲಿಂಗಪ್ಪ, ಕರಬಸಪ್ಪ, ಸೂರ್ಯಕಾಂತ, ಎದುರುದಾರರ ಕಡೆಯಿಂದ 5-6 ಜನ ಸೇರಿದ್ದರು. ಸುಮಾರು 50 ಜನ ಸಂಬಂಧಿಕರು ಇದ್ದರು. ನಮ್ಮ ಕಡೆಯಿಂದ 50 ಜನ, ಅವರ ಕಡೆಯಿಂದ 50 ಜನ ಸಂಬಂಧಿಕರು ಇದ್ದರು. ನಾನು ಹೆಸರು ಹೇಳಿದವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು. ಈ ಮದುವೆಗೂ ಮುಂಚೆ ನನಗೆ ನನಗೆ ಮದುವೆ ಆಗಿರಲಿಲ್ಲ. ಸಾಕ್ಷಿಗೆ ಈಗ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿರುವವರು ಸಾಕ್ಷಿಯ ಮೊದಲನೇ ಗಂಡ ಎಂದು ಪ್ರಶ್ನೆ ಕೇಳಿದರೆ ಸಾಕ್ಷಿ ಅವರನ್ನು ಗುರುತಿಸಿರುವುದಿಲ್ಲ ನನಗೆ ಮೊದಲು ಮದುವೆ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಆಧಾರ ಕಾರ್ಡನಲ್ಲಿ ಅಡ್ಡ ಹೆಸರು ಅನಂತಗೋಳ ಎಂದು ನಮೂದು ಮಾಡಿರುತ್ತೇವೆ. ನನ್ನ ಮಕ್ಕಳ ಅಡ್ಡ ಹೆಸರು ಅನಂತಗೋಳ ಎಂದೇ ನಮೂದಿಸಿರುತ್ತೇನೆ. 3 ನೇ ಅರ್ಜಿದಾರರ ಆಧಾರ ಕಾರ್ಡನಲ್ಲಿ ಕುಣಿ ಸಂಗಾವಿ ಎಂದು ಇರುತ್ತದೆ ಎಂದರೆ ಸಾಕ್ಷಿ ಅದು ತಪ್ಪಾಗಿರುತ್ತದೆ ಎಂದು ಹೇಳುತ್ತಾರೆ. 3 ನೇ ಅರ್ಜಿದಾವರರು 2 ವರ್ಷದವನಿದ್ದಾಗ ಆಧಾರ ಕಾರ್ಡ ಮಾಡಿಸಿರುತ್ತೇವೆ. ಈ ಪ್ರಕರಣ ದಾಖಲಿಸಿದ ನಂತರ ಆಧಾರ ಕಾರ್ಡ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ಮಕ್ಕಳ ಶಾಲಾ ದಾಖಲಾತಿಗಳಲ್ಲಿಯೂ ಅಡ್ಡ ಹೆಸರು ಅನಂತಗೋಳ ಎಂದು ನಮೂದಿಸಿರುತ್ತೇವೆ. ನಾನು ಒಕ್ಕಲುತನ ಮಾಡುತ್ತೇನೆ. ನಾನು ದೇವರ ಪೂಜೆ ಮಾಡುತ್ತೇನೆ. ಸಾಕ್ಷಿಗೆ ಈಗ ಎರಡು ಭಾವಚಿತ್ರಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ನಿಡಿ-1, 2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು ಪೂಜೆ ಮಾಡುವಾಗ ಸದರಿ ಭಾವಚಿತ್ರ ತೆಗೆದಿರುತ್ತಾರೆ ನಾನು ಪಟ್ಟ ಕಟ್ಟಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಪಟ್ಟ ಕಟ್ಟಿಕೊಳ್ಳುವವರೆ ಕವಡೆ ಹಾಗೂ ಪರಡಿ ಹಾಕಿಕೊಳ್ಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪಟ್ಟ ಕಟ್ಟಿಕೊಳ್ಳವವರು ಮದುವೆ ಮಾಡಿಕೊಳ್ಳುವುದಿಲ್ಲ ಎಂದರೆ ಸರಿ. ಅವರು ಕೇವಲ ದೇವರ ಸೇವೆ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ನಾನು ಎದುರುದಾರನೊಂದಿಗೆ ಮದುವೆ ಮಾಡಿಕೊಂಡಿರುವುದಿಲ್ಲ ಎಂದರೆ

ಸರಿಯಲ್ಲ. 2 ರಿಂದ 5 ನೇ ಅರ್ಜಿದಾರರು ಎದುರುದಾರರಿಗೆ ಹುಟ್ಟಿದ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರನ್ನು ಬಿಟ್ಟು 2-3 ವರ್ಷಗಳು ಅಯಿತು. ನಾನು ಎದುರುದಾರರೊಂದಿಗೆ ಇರಲೇ ಇಲ್ಲ ಎಂದರೆ ಸರಿಯಲ್ಲ. ಎದುರುದಾರರು ಅವರ ಮಕ್ಕಳ ಮೇಲೆ ಉಪಜೀವನಕ್ಕಾಗಿ ಜೀವನಾಂಶ ಕೇಳಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರ ಹೆಂಡತಿ ಹೆಸರು ಕಲಾವತಿ. ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ಅವರ ಹೆಸರುಗಳು ಶಿವಕುಮಾರ, ಲಕ್ಷ್ಮಿ, ವಿಜಯಕುಮಾರ, ರಾಜಶ್ರೀ ಇರುತ್ತದೆ. ಇವರ ವಯಸ್ಸುಗಳು ನನಗೆ ಗೊತ್ತಿಲ್ಲ. ಶಿವಕುಮಾರರವರಿಗೆ ಅಂದಾಜು 30 ವರ್ಷಗಳು ಇರಬಹುದು ಎಂದರೆ 28 ವರ್ಷ ಇರಬಹುದು ಎಂದು ಹೇಳುತ್ತಾರೆ. ವಿಜಯಕುಮಾರವರಿಗೆ ಅಂದಾಜು 27 ವರ್ಷ ಇರುತ್ತದೆ. ಹೆಣ್ಣು ಮಕ್ಕಳಿಗೆ ಅಂದಾಜು 20 ವರ್ಷಗಳು ಇರಬಹುದು. ನಮ್ಮೂರಿನ ಸೂರ್ಯಕಾಂತ ಪಾಟೀಲರವರ ವಿರುದ್ಧ ಎದುರುದಾರರು ಪ್ರಚಾರ ಮಾಡಿರುತ್ತಾರೆ ಎಂದರೆ ಸರಿ. ನಾನು ಸೂರ್ಯಕಾಂತ ಪಾಟೀಲರವರ ಪರವಾಗಿ ಇದ್ದೆ ಎಂದರೆ ಸರಿ. ಸೂರ್ಯಾಕಾಂತ ಪಾಟೀಲರವರೇ ಈ ದಾವೆ ಸಲ್ಲಿಸಲು ನನಗೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಉತ್ಪನ್ನ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಿನಕ್ಕೆ ರೂ.150/- ಕೂಲಿ ನೀಡುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಹೇಳಲು ಆಗುವುದಿಲ್ಲ. ಎದುರುದಾರ ನನಗೆ ಹೊಡೆ ಬಡೆ ಮಾಡುವುದು, ಬೈಯ್ಯುವುದು ಮಾಡುತ್ತಾನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನನ್ನನ್ನು ಮದುವೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರ ಊರಲ್ಲಿ ಪ್ರತಿಷ್ಟಿತ ವ್ಯಕ್ತಿ ಇರುವ ಕಾರಣ ಅವನ ವಿರುದ್ಧ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ರಿಂದ 5 ನೇ ಅರ್ಜಿದಾರರು ಎದುರುದಾರನಿಗೆ ಹುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಬಂಗಾರ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನಿಂದ ರೂ.5 ಲಕ್ಷ ಗಳಿಸುತ್ತಾರೆ ಎಂದು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದಷ್ಟು ಜೀವನಾಂಶ ನೀಡುವ ಸಾಮರ್ಥ ಎದುರುದಾರನಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಶಾಲೆ ದಾಖಲೆಗಳನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಇದಕ್ಕೂ ಮುಂಚೆ 2-3 ಮದುವೆ ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.